'ಝುಲ್' ಎಂದಿತ್ತು. ಹದಿನೆಂಟು ವರ್ಷಗಳ ಅನಂತರ ಹುಡುಕಿಕೊಂಡು ಬರಬೇಕೆ? ನನ್ನೆಲ್ಲ ಆಸೆಗಳು ಬರಿದಾಗಿ ಬತ್ತಿಹೋದ ಮೇಲೆ... ಪ್ರೀತಿಯ ಸೆಲೆ ಚಿಮ್ಮೀತೆ? ಕೊಲ್ಹಾಪುರದ ಪ್ರಸಂಗ ನೆನಪಾಯಿತು. ಬೇಕೆಂದೇ ಒಂದು ಪೈಸೆಯನ್ನೂ ಬಿಡದೇ ಎಲ್ಲ ಕಟ್ಟಿಕೊಂಡು ನನ್ನನ್ನು ಏಕಾಂಗಿಯಾಗಿ ಪರ ಊರಿನಲ್ಲಿ ಬಿಟ್ಟು ಹೋದವ ಈಗ ಚೆನ್ನಾಗಿ ಬಾಳಿಸುತ್ತಾನೆಂದು ಹೇಗೆ ನಂಬಬೇಕು? ಅಂದು ಜೀವಕ್ಕನಿರದಿದ್ದರೆ ನಾನಿಂದು ಯಾವ ಮೃತ್ಯು ಕೂಪದಲ್ಲಿ ಬಿದ್ದಿರುತ್ತಿದ್ದೆನೋ?

ವೈನಿಯ ಸಡಗರ ಮುಂದುವರೆದಿತ್ತು. "ಅತ್ತಿ, ಮಾವ, ಭಾವಜಿ ಇದ್ದಾಗನ ಬಂದಿದ್ರ ಅವರೆಷ್ಟು ಖುಷಿಪಡತಿದ್ರೋ ಏನೋ? ಆತು... ಈಗರೆ ಬಂದ್ರಲಾ. ರುಕ್ಕೀ, ನೀ ರಾಯರನ್ನ ಭಾಳ ನಂಬತಿದ್ಯಲಾ... ಅದಕ್ಕ ರಾಯರು ನಿನ್ನ ರಾಯರನ್ನ ಗುರುವಾರನ ಕರಸ್ಯಾರ" ಎನ್ನುವ ಮಾತಿನ ಲಹರಿ ನಿಲ್ಲುತ್ತಿಲ್ಲ. ಕೇಶಣ್ಣನಿಗೆ, "ಇಷ್ಟು ದಿವಸ ಸಾಂಗ್ಲಿ, ಪುಣೆ ಅಂತೆಲ್ಲಾ ಬ್ಯಾರೇ ಕಡೆ ಇದ್ದರಂತ. ಛೊಲೊ ನೌಕರಿ ಸಿಕ್ಕ ಮ್ಯಾಲೆ ಕರಕೊಂಡ್ಹೋಗೋಣಂತ ಬಂದಿದ್ದಿಲ್ಲಂತ. ಈಗ ಮುಂಬೈನ್ಯಾಗ ಛೊಲೊ ನೌಕರಿ ಸಿಕ್ಕದಂತ" ಎನ್ನುವ ಮಾತಿನ ಸಂತಸದ ನದಿ ಹರಿಯುತ್ತಿತ್ತು. ನನಗೆ ಮತ್ತೆ ಎದೆಯೊಳಗೆ ನಡುಕ. ಕೊಲ್ಹಾಪುರದಿಂದ ಹೇಗೋ ಪಾರಾಗಿ ಬಂದೆ. ಮತ್ತೆ ಅದೇ ಕತೆಯಾದರೆ ಮುಂಬೈನಿಂದ ಪಾರಾಗಿ ಬರುವ ಬಗೆ ಹೇಗೆ? ಬಂದರೂ ಎಲ್ಲಿಗೆ? ಎಲ್ಲ ಉತ್ತರವಿಲ್ಲದ ಪ್ರಶ್ನೆಗಳು. ಅಂಥ ಮನುಷ್ಯನನ್ನು ಇವರೆಷ್ಟು ಸಲೀಸಾಗಿ ನಂಬುತ್ತಿದ್ದಾರೆ. ಅಣ್ಣ, ಅಪ್ಪ ಇದ್ದರೆ ಸರಿಯಾಗಿ ವಿಚಾರಿಸಿಕೊಳ್ಳುತ್ತಿದ್ದರು. ಇವರಿಗೆ ನನ್ನ ನಿವಾರಿಸಿಕೊಳ್ಳುವುದೇ ಮುಖ್ಯ ಉದ್ದೇಶವಾಗಿರುವಾಗ ಹೇಳುವುದಾದರೂ ಏನನ್ನು? "ಇನ್ನ ನಮ್ಮ ಮಕ್ಕಳ ಕಾರ್ಯಗಳು ಸುರುವಾಗ್ತಾವ. ಮನ್ಯಾಗ ಸ್ವಾದರತ್ತಿ ಇದ್ದಾಳ ಅಂದ್ರ ಹೆಣ್ಣು ಕೊಡಾವ್ರು ಹಿಂದ... ಮುಂದ ನೋಡ್ತಾರ. ಅಷ್ಟರೊಳಗ ಇಕಿನ್ನ ನೆಲಿಗೆ ಹಚ್ಚೇವಿ... ಅನಿಸಿಬಿಟ್ಟರ ಸಾಕು. ಹಂಗ... ರೊಕ್ಕಾ ಪಕ್ಕಾ ಕೇಳಿದ್ರ ಒಂದ ನಯಾ ಪೈಸಾನೂ ಕೊಡಲಿಕ್ಕೆ ಹೋಗಬ್ಯಾಡ್ರಿ. ತಿಳೀತಿಲ್ಲೋ..." ಎಂದು ಸಣ್ಣಗೆ ಹೇಳಿದ್ದರೂ ಈ ಹಾಳು ಕಿವಿಗೆ ಬಿದ್ದಿದ್ದವು. ಸುತ್ತೆಲ್ಲ ಜಗ ತಿರುಗಿದ ಹಾಗೆ.



ಸರ್ರನೆದ್ದು, "ವೈನಿ, ನಾ ರಾಯರ ಮಠಕ್ಕ ಹೋಗಿಬರ್ತೇನಿ" ಎನ್ನುತ್ತ ಹೊರಟೆ. "ಹ್ಞೂಂ... ಹೋಗಿ ಬಾ. ಹುಂಡಿಗೆ ಒಂದು ರುಪಾಯಿ ಹಾಕು" ಎಂದು ಕೂಗಿದ್ದು ಕೇಳಿಸಿತ್ತು. 'ಹೌದು... ಆವತ್ತ ಯಾಕ ಬಿಟ್ಟು ಹೋದ್ರಿ? ಅದೂ ಅಂಥಾ ಪರಿಸ್ಥಿತಿವಳಗ... ಇವತ್ತ ಯಾಕ ಬಂದ್ರಿ?' ಎಂದು ಕೊರಳ ಪಟ್ಟಿ ಹಿಡಿದು ಕೇಳಲು ಯಾರಿರಲಿಲ್ಲ ಇವರು ನನ್ನನ್ನು ನಿವಾರಿಸಿಕೊಳ್ಳಲು ತುದಿಗಾಲ ಮೇಲೆ ನಿಂತಿದ್ದಾರೆ. ಅವನ ಜೊತೆ ಹೋಗದ ಹೊರತು ನನಗೆ ಬೇರೆ ಉಪಾಯವೇ ಇಲ್ಲವೇ? ಬೃಹದಾಕಾರದ ಪ್ರಶ್ನೆ. ರಾಯರ ಮುಂದೆ ನಿಂತು ಭಕ್ತಿಯಿಂದ ಕೈಮುಗಿದೆ. "ಮಾನ, ಪ್ರಾಣ ಎಲ್ಲಾ ನಿಂದಪಾ. ಛೊಲೊತ್ನ್ಯಾಗಿ ದಡಾ ಸೇರಸು" ಎಂದವಳೇ ಕಣ್ಣೊರೆಸಿಕೊಂಡೆ. ಪರಿಚಯದವರು ಮಾತನಾಡಿಸುತ್ತಿದ್ದರೂ ಬೇಡವಾಗಿ ಮಂಗಳಾರತಿ ತೆಗೆದುಕೊಂಡು ಪ್ರದಕ್ಷಿಣೆ ಮುಗಿಸಿ ಹೊರಬಂದೆ. ನಸುಗತ್ತಲು ಆವರಿಸುತ್ತಿತ್ತು. ತುಂಬು ಸೆರಗು ಹೊದ್ದು ಹತ್ತು ಹೆಜ್ಜೆಗಳನ್ನಿಡುತ್ತಿದ್ದಂತೆ ಮಂಚಿ ಕೂಗಿದ್ದಳು. "ಒಂದೀಟು ನಿಂದರು... ಓಡಬ್ಯಾಡಾ" ಎನ್ನುತ್ತ ಕೈಹಿಡಿದು ಮರೆಗೆ ಕರೆದೊಯ್ದಿದ್ದಳು.

"ನಿನ್ನ ಗಂಡಾ ಬಂದಾನ ಗೊತ್ತೇತಿಲ್ಲೋ?" ಎಂದಳು. ಮೌನವಾಗಿ ಕತ್ತಾಡಿಸಿದೆ. "ಹಂಗ ಇದ್ದಾನ ಭಾಡ್ಯಾ. ಏನೇನೂ ಬದ್ಲಾಗಿಲ್ಲಾ. ನೀ ಅಂವನ ಕುಟ್ಟೆ ಹೋಗಬ್ಯಾಡಾ. ನಿನ್ನ ಎಲ್ಲರ ಕೆಟ್ಟ ಜಾಗಾಕ್ಕ ವಯ್ದು ಕೆಡವತಾನು. ಬಾ ಇಲ್ಲೆ... ತೋರಸ್ತೇನಿ" ಎಂದು ಎಳೆದುಕೊಂಡೇ ಕರೆದೊಯ್ದಳು. ಒಂದು ಮನೆಯ ಬಾಗಿಲು ತೆಗೆದು "ಅಜ್ಜಾ... ಮಾಳಿಗಿ ಮ್ಯಾಲಿನ ಅರವಿ ತರ್ತೇನಿ" ಎಂದವಳೇ ನನ್ನ ಕೈ ಹಿಡಿದೇ ಅಟ್ಟ ಏರಿದಳು. ನನಗೆ ನೆನಪಿದ್ದಂತೆ ಅದು ದೊಡ್ಡಣ್ಣನ ಗೆಳೆಯ ವಾದಿರಾಜನ ಮನೆ. ಪುಟ್ಟ ಕಿಟಕಿಯೊಳಗಿಂದ ಪಕ್ಕದ ಮನೆಯ ಸಮಾಚಾರವೆಲ್ಲ ಸ್ಪಷ್ಟವಾಗಿ ಕಾಣುತ್ತಿತ್ತು. ಅಲ್ಲಿ ಇನ್ನೂ